ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು -1**

---

**ಸಂಖ್ಯೆ:ಸಿ1(4)ಗ್ರೂಪ್-ಬಿ/ಸೇವಾ ವಿವರ/11/2017-18** **ದಿನಾಂಕ: 20-06-2017**

**ಅತೀ ತುರ್ತು**

**ಇವರಿಗೆ:**

1. ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ಮತ್ತು ಆರ್.ಎಂ.ಎಸ್.ಎ, ಬೆಂಗಳೂರು
2. ನಿರ್ದೇಶಕರು(ಪರೀಕ್ಷೆಗಳು), (ಡಿ.ಎಸ್.ಇ.ಆರ್.ಟಿ.), (ಅಲ್ಪಸಂಖ್ಯಾತ ಭಾಷೆಗಳು), (ಎಸ್.ಎಸ್.ಎ), (ಆರ್.ಎಂ.ಎಸ್.ಎ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು, ಬೆಂಗಳೂರು ವಿಭಾಗಗಳು.
4. ಸಹನಿರ್ದೇಶಕರು, (ಟಿ.ಬಿ.ಎಫ್), (ಮಧ್ಯಾಹ್ನ ಉಪಹಾರ ಯೋಜನೆ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
6. ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಪ್ರಾಂಶುಪಾಲರು, ಡಯಟ್, ಸಾರ್ವಜನಿಕ ಶಿಕ್ಷಣ ಇಲಾಖೆ.

**ಮಾನ್ಯರೆ,**

**ವಿಷಯ:**-ದಿನಾಂಕ 31-05-2017ರಲ್ಲಿದ್ದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ (ಬೋಧಕ ವರ್ಗ) ಅಧಿಕಾರಿಗಳ ಸೇವಾ ವಿವರಗಳ ಬಗ್ಗೆ.

-&&&-

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ (ಬೋಧಕ ವೃಂದ) ಸೇವಾ ವಿವರಗಳ ಮಾಹಿತಿಯು ಈ ಕಛೇರಿಗೆ ಅಗತ್ಯವಾಗಿ ಬೇಕಾಗಿರುತ್ತದೆ.

ಆದ್ದರಿಂದ ತಮ್ಮ ವ್ಯಾಪ್ತಿಯ ಪ್ರತಿ ಶಾಲೆ/ಕಾಲೇಜು/ಕಛೇರಿಯಿಂದ (ಡಯಟ್ ಒಳಗೊಂಡಂತೆ) ಮಾಹಿತಿ ಪಡೆದು ಈ ಕೆಳಕಂಡ ನಮೂನೆಗಳಲ್ಲಿ ದಿನಾಂಕ 31-05-2017ರಲ್ಲಿದ್ದಂತೆ ಇಲಾಖೆಯ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಸೇವಾ ವಿವರ / ಖಾಲಿ ಹುದ್ದೆ / ಮಂಜೂರಾದ ಹುದ್ದೆಗಳ ಮಾಹಿತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆ-1, 2 ಮತ್ತು 3 ಗಳನ್ನು ~~ಇಥಛಿಜಟ ಈಂಡಿಟಚಿಣ~~ [EXEL FORMAT] ನಲ್ಲಿ ಭರ್ತಿ ಮಾಡುವುದು ಹಾಗೂ ನಮೂನೆ-4ನ್ನು ~~ಔಡಿಜ ಈಂಡಿಟಚಿಣ~~ [WORD] ನಲ್ಲಿ ನಮೂದಿಸಿ ಇದರ ಸಾಫ್ಟ್ ಕಾಪಿಯನ್ನು est1cpi@gmail.com ಈ ವಿಳಾಸಕ್ಕೆ ಇ-ಮೇಲ್ ಮೂಲಕ ಮತ್ತು ಸಹಿ ಮಾಡಿದ ಹಾರ್ಡ್ ಕಾಪಿಯನ್ನು **"ಶ್ರೀ ಟಿ.ಎಸ್.ಕಮಲಾಕರ, ಹಿರಿಯ ಸಹಾಯಕ ನಿರ್ದೇಶಕರು (ಸಿಬ್ಬಂದಿ-1 ಶಾಖೆ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560 001."** ಇವರಿಗೆ ದಿನಾಂಕ 25-06-2017ರೊಳಗೆ ತಲುಪುವಂತೆ ಅಂಚೆ ಮೂಲಕ ಅಥವಾ ಮುದ್ದಾಂ ಕಳುಹಿಸಲು ತಿಳಿಸಿದೆ.

***ಸದರಿ ಮಾಹಿತಿಯನ್ನು ತುರ್ತಾಗಿ ಸರ್ಕಾರಕ್ಕೆ/ ಸಲ್ಲಿಸಬೇಕಾಗಿರುವುದರಿಂದ ವಿಷಯವನ್ನು ಅತೀ ತುರ್ತು*** ಎಂದು ಪರಿಗಣಿಸಿ ಆದ್ಯತೆ ಮೇರೆಗೆ ಮಾಹಿತಿಯನ್ನು ದಿನಾಂಕ 25-06-2017ರ ಒಳಗಾಗಿ ಸಲ್ಲಿಸಲು ತಿಳಿಸಿದೆ.

**ಸೂಚನೆ:** ನಮೂನೆ-4ರ ಮಾಹಿತಿಯನ್ನು ಪ್ರತಿಯೊಬ್ಬರಿಂದ ಪ್ರತ್ಯೇಕವಾಗಿ ಪಡೆದು, ಮೇಲಾಧಿಕಾರಿಗಳು ದೃಢೀಕರಿಸಿದ ನಂತರ ನಮೂನೆ-1ರಲ್ಲಿನ ಕ್ರಮಸಂಖ್ಯೆಯಂತೆ ಜೋಡಿಸಿ ಸಲ್ಲಿಸುವುದು.

**ತಮ್ಮ ನಂಬುಗೆಯ,**

**[ಎಸ್.ಕಾತ್ಯಾಯನಿದೇವಿ]**

**ಜಂಟಿ ನಿರ್ದೇಶಕರು [ಆಡಳಿತ]**

ಜಿಲ್ಲೆ ಹೆಸರು :

ನಮೂನೆ-1

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ (ಬೋಧಕ ವೃಂದ) ಅಧಿಕಾರಿಗಳ ಸೇವಾ ವಿವರ (31-05-2017 ರಲ್ಲಿರುವಂತೆ)

| ಕ್ರ ಸಂ | ಪ್ರಥಮ ಕೆ.ಜಿ.ಐ.ಡಿ. ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ | ಕಛೇರಿ/ಶಾಲೆಯ ಹೆಸರು ವಿಳಾಸ | ಜನ್ಮ ದಿನಾಂಕ (dd/mm/yyyy) | ವಿದ್ಯಾರ್ಹತೆ | ಪದವಿ ತರಗತಿಯಲ್ಲಿ ವ್ಯಾಸಂಗ ಮಾಡಿದ ಐಚ್ಛಿಕ ವಿಷಯಗಳು | ಸರ್ಕಾರಿ ಕೆಲಸಕ್ಕೆ ಸೇರಿದ ದಿನಾಂಕ (dd/mm/yyyy) | ಗ್ರೂಪ್-ಬಿ ಹುದ್ದೆಯಲ್ಲಿ ಸೇವೆಗೆ ಸೇರಿದ ದಿನಾಂಕ (dd/mm/yyyy) | ಪ್ರಸ್ತುತ ಸ್ಥಳದಲ್ಲಿ ಯಾವ ದಿನಾಂಕದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ (dd/mm/yyyy) | ಗ್ರೂಪ್ ಬಿ ಹುದ್ದೆಯಲ್ಲಿ ನೇಮಕಾತಿ ವಿಧಾನ ನೇರ/ಬಡ್ತಿ | ಜಾತಿ & ವರ್ಗ (ಪ.ಜಾ/ ಪ.ಪಂ/ ಇತರೆ) | ಅಂಗವಿಕಲರೆ / ಸೈನಿಕರ ಅವಲಂಬಿತರೆ/ ವಿಧವೆ/ ಪತಿ ಪತ್ನಿ ಸರ್ಕಾರಿ ನೌಕರಿಯಲ್ಲಿ ಇರುವರೇ / ಮಾರಣಾಂತಿಕ ಖಾಯಿಲೆಯಿಂದ ಬಳಲುತ್ತಿರುವವರೇ (ವಿವರ ನೀಡುವುದು) | ಸ್ವಂತ ಸ್ಥಳ, ಗ್ರಾಮ, ಊರು, ತಾಲ್ಲೂಕು, ಜಿಲ್ಲೆ | ಷರಾ |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |

ವರದಿ ಮಾಡುವ ಅಧಿಕಾರಿಯ ಸಹಿ
ಕಛೇರಿ ಮೊಹರಿನೊಂದಿಗೆ

ಕಛೇರಿ ಹೆಸರು :

ನಮೂನೆ-2

ಸಾರ್ವಜನಿಕ ಶಿಕ್ಷಣ ಇಲಾಖೆ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ (ಬೋಧಕ ವೃಂದ) ಖಾಲಿ ಹುದ್ದೆಗಳ ವಿವರ (ದಿನಾಂಕ: 31-05-2017ರಲ್ಲಿರುವಂತೆ)

| ಕ್ರ. ಸಂ | ಖಾಲಿ ಇರುವ ಹುದ್ದೆಗಳ ಪದನಾಮ | ಹುದ್ದೆ ಖಾಲಿ ಇರುವ ಶಾಲೆ/ ಕಾಲೇಜು ಕಛೇರಿ/ಸಂಸ್ಥೆಯ ಪೂರ್ಣ ವಿಳಾಸ | ಹುದ್ದೆಖಾಲಿ ಇರಲು (ಉದ್ಭವಿಸಲು) ಕಾರಣ | ಯಾವ ದಿನಾಂಕದಿಂದ ಹುದ್ದೆ ಖಾಲಿ ಇದೆ | ವಲಯ (ಎ.ಬಿ.ಸಿ.) |
|---|---|---|---|---|---|
| 1 | 2 | 3 | 4 | 5 | 6 |
| 1 | | | | | |
| 2 | | | | | |

ವರದಿ ಮಾಡುವ ಅಧಿಕಾರಿಯ ಸಹಿ
ಕಛೇರಿ ಮೊಹರಿನೊಂದಿಗೆ